ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಸಚಿನ್ ಶಂಕರ್ ಮಗದುಮ್

ಶ್ರೀಮತಿ ದೇವಮ್ಮ ಮತ್ತು ಇತರರು -ವಿರುದ್ಧ-ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 17842/2019 (ಎಸ್ಸಿ-ಎಸ್ಟಿ), ದಿನಾಂಕ 9 ನೇ ಜುಲೈ, 2021

ಆದೇಶ

ನ್ಯಾಯಮೂರ್ತಿ ಶ್ರೀ ಸಚಿನ್ ಶಂಕರ್ ಮಗದುಮ್:

ಅರ್ಜಿದಾರರ/ಜಮೀನು ಪಡೆದವರ ಪರವಾಗಿ ಅರ್ಜಿ ಸಲ್ಲಿಸಲಾದ ಜಮೀನುಗಳ ಮರುಸ್ವಾಧೀನದ ಆದೇಶ ಮಾಡಿ 2 ನೇ ಪ್ರತಿವಾದಿಗಳು/ಸಹಾಯಕ ಆಯುಕ್ತರು ಹೊರಡಿಸಿದ ಆದೇಶವನ್ನು ತಳ್ಳಿ ಹಾಕಿ, ಅಪೀಲನ್ನು ಪುರಸ್ಕರಿಸಿ, 1 ನೇ ಪ್ರತಿವಾದಿಗಳು/ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ, ಶೀರ್ಷಿಕೆಯಲ್ಲಿರುವ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

2. ಪ್ರಸ್ತುತ ಮೊಕದ್ದಮೆಯ ಸಂಗತಿಗಳನ್ನು ನಾನು ಪ್ರಸ್ತಾಪಿಸುವುದಕ್ಕೆ ಮೊದಲು, ನೆಕ್ಕಂಟಿ ರಮಾ ಲಕ್ಷ್ಮಿ - ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು 1 ಹಾಗೂ ವಿವೇಕ್ ಎಮ್. ಹಿಂದುಜಾ ವಿರುದ್ಧ ಎಮ್. ಅಶ್ವಥ್ 2-ಮೊಕದ್ದಮೆಗಳಲ್ಲಿ, ಈ ವಿವಾದ ಕುರಿತಂತೆ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪುಗಳನ್ನು ಚ ಉಲ್ಲೇಖಿಸುವುದು ಪ್ರಯೋಜನಕಾರಿಯಾಗುವುದು.ದಿನಾಂಕ: 05.04.2021 ರಂದು ವಿಲೆ ಮಾಡಿದ ರಿಟ್ ಅಪೀಲುಸಂಖ್ಯೆ: 16/2021 ರಲ್ಲಿ ವಿಭಾಗೀಯ ಪೀಠವು ಸ್ಥಿರೀಕರಿಸಿದ್ದ ರಿಟ್ ಅರ್ಜಿಸಂಖ್ಯೆ: 50446/2012 ರಲ್ಲಿ, ಈ ನ್ಯಾಯಾಲಯದ ಸಮನ್ವಯ ಪೀಠವು ನೀಡಿದ ತೀರ್ಪನ್ನು ಉಲ್ಲೇಖಿಸುವುದು ಸಹ ಪ್ರಯೋಜನಕಾರಿಯಾಗಿರುತ್ತದೆ.

3. ನೆಕ್ಕಂಟಿ ರಮಾ ಲಕ್ಷ್ಮಿ (ಮೇಲೆ ಹೇಳದ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು, ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ (ಕೆಲವು ಜಮೀನುಗಳ ಹಸ್ತಾಂತರಕ್ಕೆ ನಿಷೇಧ) ಅಧಿನಿಯಮ, 1978 ರ (ಸಂಕ್ಷಿಪ್ತವಾಗಿ " ಪಿಟಿಸಿಎಲ್ ಅಧಿನಿಯಮ " ಎಂದು ಉಲ್ಲೇಖಿಸಲಾಗುವುದು) 6 ನೇ ಪ್ರಕರಣವನ್ನು ಅರ್ಥೈಸುವಾಗ, ಕಾಲ ಪರಿಮಿತಿಯ ಅಂಶವನ್ನು ಪರಿಶೀಲಿಸುವ ಸಂದರ್ಭ ಬಂದಿತ್ತು.ಅದರಲ್ಲಿ ಹಿತಾಸಕ್ತ ವ್ಯಕ್ತಿಗಳು ಮಾರಾಟವನ್ನು ರದ್ದುಗೊಳಿಸಲು ಕೋರಿ ಸೂಕ್ತ ಅರ್ಜಿಯನ್ನು ಸಲ್ಲಿಸಿದಲ್ಲಿ, ಪಿಟಿಸಿಎಲ್ ಅಧಿನಿಯಮದ 4ನೇ ಪ್ರಕರಣದ ಅಡಿಯಲ್ಲಿ ಅದು ಅಸಿಂಧುವಾಗುವುದೆಂದು ಅಭಿಪ್ರಾಯಪಟ್ಟಿತ್ತು.ಸರ್ವೋಚ್ಚ ನ್ಯಾಯಾಲಯವು, ಛೇದಿ ಲಾಲ್ ಯಾದವ್ -ವಿರುದ್ಧ-ಹರಿ ಕಿಶೋರ್ ಚ ಯಾದವ್ 3 ಮೊಕದ್ದಮೆ, ಹಾಗೆಯೇ ನಿಂಗಪ್ಪ ವಿರುದ್ಧ-ಜಿಲ್ಲಾಧಿಕಾರಿಗಳು ಮತ್ತು ಇತರರು 4* ಮೊಕದ್ದಮೆಯಲ್ಲಿ ವಿಧಿಸಿದ ತತ್ತ್ವಗಳನ್ನು ಪುನರುಚ್ಚರಿಸುತ್ತಾ, ಶಾಸನವು ಪರಿಮಿತ ಅವಧಿಯನ್ನು ನಿಯಮಿಸದಿರುವಲ್ಲಿ, ಶಾಸನದ ಉಪಬಂಧಗಳನ್ನು ಸೂಕ್ತ ಕಾಲದೊಳಗೆ ಅನ್ವಯಿಸಬೇಕು ಎಂಬ ಕಾನೂನಿನ ಇತ್ಯರ್ಥಗೊಂಡ ನಿಲುವನ್ನು ಒತ್ತಿ ಹೇಳಿತ್ತು.ಹಿತಾಸಕ್ತ ವ್ಯಕ್ತಿಯು ಕ್ರಮ ತೆಗೆದುಕೊಳ್ಳಬೇಕಾಗಿರುವ ಕಾಲಾವಧಿಗೆ ಪ್ರಾಧಿಕಾರಿಗಳು ಯುಕ್ತ ಗಮನ ನೀಡಬೇಕೆಂದು ಸರ್ವೋಚ್ಚ ನ್ಯಾಯಾಲಯವು ಚ ಅಭಿಪ್ರಾಯಪಟ್ಟಿತ್ತು.ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ಹಿತಾಸಕ್ತ ವ್ಯಕ್ತಿಗಳು ಕ್ರಮವನ್ನು ಪ್ರಾರಂಭಿಸಲು ಅತಿಯಾದ ವಿಳಂಬ ಮಾಡಿದಲ್ಲಿ, ಆಗ ಅದು ಸಕ್ಷಮ ಪ್ರಾಧಿಕಾರಿಗಳು ಪರಭಾರೆಗಳನ್ನು ರದ್ದುಗೊಳಿಸದಿರುವ ವಿವೇಚನಾಧಿಕಾರಕ್ಕೆ ಒಳಪಟ್ಟಿರಬೇಕೆಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿತ್ತು.ದಿನಾಂಕ: 24.01.2020 ರಂದು ವಿಲೆ ಮಾಡಿದ ರಿಟ್ ಅರ್ಜಿಸಂಖ್ಯೆ: 50446/2012 ರಲ್ಲಿ, ಈ ನ್ಯಾಯಾಲಯದ ಸಮನ್ವಯ ಪೀಠವು, ಹತ್ತು ವರ್ಷಗಳಷ್ಟು ವಿಳಂಬವಾಗಿದ್ದ ಮೂಲ ಜಮೀನು ಪಡೆದವನು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ನಿರಾಕರಿಸಿತು.ಅರ್ಜಿಯನ್ನು ಸೂಕ್ತ ಕಾಲದೊಳಗೆ ಸಲ್ಲಿಸದೇ ಇದ್ದುದ್ದರಿಂದ ಅದು ಸಮರ್ಥನೀಯವಾಗಿರಲಿಲ್ಲ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿತ್ತು.ನಿರ್ಣಯವನ್ನು ದಾಖಲಿಸುವಾಗ ಈ ನ್ಯಾಯಾಲಯವು, ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ಜಮೀನನ್ನು ವಾಪಸ್ಸು ನೀಡಲು ಕೋರಿ ಒಂಭತ್ತು ವರ್ಷಗಳ ನಂತರ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಲು ನಿರಾಕರಿಸಿ ನಿಂಗಪ್ಪ ವಿರುದ್ಧ-ಜಿಲ್ಲಾಧಿಕಾರಿಗಳು ಮತ್ತು ಇತರರು

(ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪನ್ನು ಚ ಅವಲಂಬಿಸಿತ್ತು.ರಿಟ್ ಅರ್ಜಿಸಂಖ್ಯೆ: 50446/2012 ರಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠವು ನೀಡಿದ ತೀರ್ಪನ್ನು, ರಿಟ್ ಅಪೀಲುಸಂಖ್ಯೆ: 16/2021 ರಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಸ್ಥಿರೀಕರಿಸಿದೆ.

4. ಪ್ರಸ್ತುತ ಮೊಕದ್ದಮೆಯಲ್ಲಿ, 1 ನೇ ಅರ್ಜಿದಾರಳ ಪತಿ ಮತ್ತು 2 ರಿಂದ 5 ರವರೆಗಿನ ಅರ್ಜಿದಾರರ ತಂದೆಯಾದ ಈರಯ್ಯನು,ದಿನಾಂಕ: 22.09.1972 ರಂದು ಪ್ರಾಧಿಕಾರಗಳು ನೀಡಿದ ಮಂಜೂರಾತಿ ಪ್ರಕಾರ ಅರ್ಜಿ ಸಲ್ಲಿಸಿದ ಜಮೀನುಗಳ ಮೇಲೆ ಹಕ್ಕು ಮತ್ತು ಸ್ವಾಮ್ಯವನ್ನು ಆರ್ಜಿಸಿದ್ದನು.15 ವರ್ಷಗಳ ಕಾಲ ಪರಭಾರೆ ಮಾಡದಿರುವ ಷರತ್ತಿಗೆ ಒಳಪಟ್ಟು ಅರ್ಜಿ ಸಲ್ಲಿಸಿದ ಜಮೀನನ್ನು ನೀಡಲಾಗಿತ್ತು.ಮೂಲ ಜಮೀನು ಮಂಜೂರಾತಿ ಪಡೆದವನುದಿನಾಂಕ: 18.03.1991 ರಂದು ಮರಣ ಹೊಂದಿದ್ದು, ಆ ತರುವಾಯ ಆತನ ಕಾನೂನುಬದ್ಧ ಪ್ರತಿನಿಧಿಗಳಾದ 1 ನೇ, 4 ನೇ, 5 ನೇ ಅರ್ಜಿದಾರರು ಮತ್ತು 5 ನೇ ಪ್ರತಿವಾದಿಯು,ದಿನಾಂಕ: 24.08.1993 ರ ನೋಂದಾಯಿತ ಕ್ರಯಪತ್ರದ ಮೇರೆಗೆ ಅರ್ಜಿ ಸಲ್ಲಿಸಿದ ಜಮೀನನ್ನು ಮಾರಾಟ ಮಾಡಿದ್ದರು ಎಂಬುದು ಅರ್ಜಿದಾರರ ಕ್ಲೇಮಾಗಿದೆ.ಮಂಜೂರಾತಿ ಷರತ್ತಿನ ಉಲ್ಲಂಘನೆಯಾಗಿದೆ ಮತ್ತು ಪರಭಾರೆಯು ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಉಪಬಂಧಗಳನ್ನು ಉಲ್ಲಂಘಿಸುತ್ತದೆ ಎಂದು ಅರ್ಜಿದಾರರು ಆರೋಪಿಸಿ, ಎಸ್ಸಿ/ಎಸ್ಟಿ, ಹೆಚ್ಎಸ್ಎನ್ಸಂಖ್ಯೆ: 14/2014-15ರಲ್ಲಿ ಅರ್ಜಿ ಸಲ್ಲಿಸುವ ಮೂಲಕ ಜಮೀನನ್ನು ಪುನರ್ವಶಕ್ಕೆ ನೀಡಬೇಕೆಂದು ಕೋರಿದ್ದಾರೆ.ಮೇಲೆ ಹೇಳಿದ ಸ ಂ ಗತಿಗಳಿ ಂ ದ ತಿಳಿದುಬರುವುದೇನೆಂದರೆ, 1972 ನೇ ಸಾಲಿನಲ್ಲಿ ಜಮೀನನ್ನು ಮಂಜೂರು ಮಾಡಲಾಗಿತ್ತು ಮತ್ತು 1993 ನೇ ಸಾಲಿನಲ್ಲಿ ಸದರಿ ಜಮೀನು ಪರಭಾರೆಯಾಗಿದೆ ಹಾಗೂ ಅರ್ಜಿಯನ್ನು 2014-15ನೇ ಸಾಲಿನಲ್ಲಿ ಸಲ್ಲಿಸಲಾಗಿದೆ.ಎಂದರೆ, 21 ವರ್ಷಗಳಷ್ಟು ವಿಳಂಬವಾಗಿದೆ.

5. ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ರಿಟ್ ಅರ್ಜಿಯಲ್ಲಿ ವಾದಿಸಿದ ಕಾರಣಗಳನ್ನು ಪುನರುಚ್ಚರಿಸಿ, 1 ನೇ ಪ್ರತಿವಾದಿ/ಜಿಲ್ಲಾಧಿಕಾರಿಗಳು ಮೊಕದ್ದಮೆಯ ಸಂಗತಿಗಳ ಮತ್ತು ಸಂದರ್ಭಗಳ ಗುಣಾರ್ಹತೆಗಳನ್ನು ಸೂಕ್ತವಾಗಿ ವಿಶ್ಲೇಷಿಸಿಯೇ ಇಲ್ಲವೆಂದು ಈ ನ್ಯಾಯಾಲಯದ ಮುಂದೆ ವಾದಿಸಿದ್ದಾರೆ.ನೆಕ್ಕಂಟಿ ರಮಾ ಲಕ್ಷ್ಮಿ ಮತ್ತು ವಿವೇಕ್ ಎಮ್. ಹಿಂದುಜಾ (ಮೇಲೆ ಹೇಳದ) ಮೊಕದ್ದಮೆಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮವು ಪ್ರಸ್ತುತ ಮೊಕದ್ದಮೆಗೆ ಅನ್ವಯವಾಗುವುದಿಲ್ಲ ಎಂದು ಅವರು ವಾದಿಸಿರುವರು.ಈ ನ್ಯಾಯಾಲಯದ ಮುಂದೆ ಅವರು ವಾದಿಸಿರುವುದೇನೆಂದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪುಗಳನ್ನು ಉಲ್ಲೇಖಿಸುವುದನ್ನು ಬಿಟ್ಟು ಬೇರೆ ಯಾವ ಕಾರಣಗಳನ್ನು ಅನ್ವಯಿಸಲಾಗುವುದಿಲ್ಲ; 2 ನೇ ಪ್ರತಿವಾದಿ/ವಿಭಾಗಾಧಿಕಾರಿಯು, ದಾಖಲೆಯಲ್ಲಿರುವ ಸಾಕ್ಷ್ಯಗಳನ್ನು ಅವಲೋಕಿಸಿ, ಭೂ ಮಂಜೂರಾತಿಯ ಸ್ಪಷ್ಟ ಉಲ್ಲಂಘನೆಯಾಗಿದೆ ಮತ್ತು ಅರ್ಜಿ ಸಲ್ಲಿಸಿದ ಜಮೀನನ್ನು ಪರಭಾರೆ ಮಾಡುವ ಮೊದಲು ಯಾವುದೇ ಅನುಮತಿಯನ್ನು ಪಡೆದಿರುವುದಿಲ್ಲವೆಂಬ ಸರಿಯಾದ ನಿರ್ಧಾರಕ್ಕೆ ಬಂದಿದ್ದಾರೆ; ಆದ್ದರಿಂದ, 2 ನೇ ಪ್ರತಿವಾದಿ/ವಿಭಾಗಾಧಿಕಾರಿಯು ಮಾರಾಟವನ್ನು ಶೂನ್ಯ ಮತ್ತು ಅಸಿಂಧುವೆಂದು ಘೋಷಿಸಿರುವುದು ಸಮರ್ಥನೀಯವಾಗಿದೆ.

6. ರಿಟ್ ಅರ್ಜಿಯಲ್ಲಿ ವಾದಿಸಿದ ಕಾರಣಗಳನ್ನು ಪುನರುಚ್ಚರಿಸಿ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಶ್ರೀಮತಿ ಪಿ. ಕಮಲ -ವಿರುದ್ಧ ಕರ್ನಾಟಕ ರಾಜ್ಯ, ಪ್ರತಿನಿಧಿಸಿದವರು ಕಾರ್ಯದರ್ಶಿ, ಕಂದಾಯ ಇಲಾಖೆ ಮತ್ತು ಇತರರು 5 ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ತೀರ್ಪನ್ನು ಹಾಗೂ ಶ್ರೀಮತಿ ರೂಪ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠವು ನೀಡಿದ ಆದೇಶವನ್ನು ಅವಲಂಬಿಸಿದ್ದಾರೆ.ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆದೇಶವನ್ನು ಅವಲಂಬಿಸಿ, ಅವರು ಅನುಬಂಧ- ಇ ಯಲ್ಲಿ ದಾಖಲಿಸಿದ ಹೆಚ್ಚುವರಿ ದಸ್ತಾವೇಜುಗಳ ಕಡೆಗೆ ಈ ನ್ಯಾಯಾಲಯದ ಗಮನ ಸೆಳೆದಿದ್ದಾರೆ.ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆದೇಶದ 6 ನೇ ಕಂಡಿಕೆಯಲ್ಲಿನ ಅಭಿಪ್ರಾಯವನ್ನವಲಂಬಿಸಿ ಮಾನ್ಯ ನ್ಯಾಯವಾದಿಗಳು, ಅರ್ಜಿ ಸಲ್ಲಿಸಿದ ಜಮೀನನ್ನು 1993 ನೇ ಸಾಲಿನಲ್ಲೇ ಮಾರಾಟ ಮಾಡಿದಾಗ್ಯೂ, ಖರೀದಿದಾರನು 2007 ನೇ ಸಾಲಿನಲ್ಲಿ ಕಂದಾಯ ದಾಖಲೆಗಳಲ್ಲಿ ತನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಿಕೊಂಡಿದ್ದನಾದ್ದರಿಂದ, ಅರ್ಜಿದಾರರು ಸಲ್ಲಿಸಿದ ಅರ್ಜಿಯು ಸೂಕ್ತ ಕಾಲಾವಧಿಯೊಳಗೇ ಇದೆ ಮತ್ತು ಈ ಮುಖ್ಯ 0 ಸಂಗತಿಗಳನ್ನು ಕುರಿತು 1 ನೇ ಪ್ರತಿವಾದಿ/ಜಿಲ್ಲಾಧಿಕಾರಿಗಳು ವ್ಯವಹರಿಸಿರುವುದಿಲ್ಲ ಎಂದು ಬಲವಾಗಿ ವಾದಿಸಿದ್ದಾರೆ.ಮೇಲೆ ಹೇಳಿದ ವಿಭಾಗೀಯ ಪೀಠವು ನೀಡಿದ ತೀರ್ಪನ್ನು ಅವಲ ಂ ಬಿಸಿ, ಅವರು ಈ ನ್ಯಾಯಾಲಯದ ಮು ಂ ದೆ ವಾದಿಸಿರುವುದೇನೆಂದರೆ, 2 ನೇ

ಪ್ರತಿವಾದಿ/ವಿಭಾಗಾಧಿಕಾರಿಯ ಮುಂದೆ ವಿಳಂಬಕ್ಕೆ ಮತ್ತು ಉಪೇಕ್ಷೆಗೆ ಸಂಬಂಧಿಸಿದಂತೆ ಖರೀದಿದಾರರು ಯಾವುದೇ ಆಕ್ಷೇಪಣೆಗಳನ್ನು ಅಥವಾ ವಾದವನ್ನು ಎತ್ತಿಲ್ಲವಾದ್ದರಿಂದ, ಪ್ರಸ್ತುತ ಅರ್ಜಿದಾರರು ವಿಳಂಬವನ್ನು ವಿವರಿಸುವ ಸಂದರ್ಭವಿರಲಿಲ್ಲ.ಆದುದರಿಂದ, ವಿಷಯವನ್ನು ಹೊಸದಾಗಿ ಪರಿಗಣಿಸಲು 2 ನೇ ಪ್ರತಿವಾದಿ/ವಿಭಾಗಾಧಿಕಾರಿಗೆ ಹಿಂತಿರುಗಿಸಲು ಇದು ಸೂಕ್ತ ಮೊಕದ್ದಮೆಯಾಗಿದೆ; ಇನ್ನೊಂದು ಕಡೆಯ ವಾದವನ್ನು ಆಲಿಸುವ (audi alteram partem) ತತ್ತ್ವಗಳ ಮೇರೆಗೆ, ವಿಳಂಬಕ್ಕೆ ಸಂಬಂಧಿಸಿದ ಕಾರಣವನ್ನು ವಿವರಿಸುವ ಅವಕಾಶವನ್ನು ನೀಡುವುದಕ್ಕೆ ಅರ್ಜಿದಾರರು ಅರ್ಹರಿರುವುದರಿಂದ, ವಿಷಯವನ್ನು ಹಿಂತಿರುಗಿಸಿದರೆ, ಅರ್ಜಿದಾರರು ಸಮರ್ಥ ಸಾಕ್ಷ್ಯವನ್ನು ಮಂಡಿಸುವರು ಮತ್ತು ವಿಳಂಬವಾಗಿದ್ದಕ್ಕೆ ವಿವರಣೆಯನ್ನು ನೀಡುವರು ಎಂದು ಈ ನ್ಯಾಯಾಲಯಕ್ಕೆ ಅವರು ನಿವೇದಿಸಿಕೊಂಡಿರುವರು.

6. ರಿಟ್ ಅರ್ಜಿಸಂಖ್ಯೆ: 55492/2017,ದಿನಾಂಕ: 06.03.2021

7. ಅರ್ಜಿದಾರರು ಮಂಡಿಸಿದ ವಾದದ ಎರಡನೇ ಭಾಗವೆಂದರೆ, 2 ನೇ ಮತ್ತು 3 ನೇ ಅರ್ಜಿದಾರರು ಕ್ರಯಪತ್ರದ ಪಕ್ಷಕಾರರೇ ಆಗಿರುವುದಿಲ್ಲವಾದ್ದರಿಂದ, ಹೆಣ್ಣು ಮಕ್ಕಳಾಗಿ ಅವರು ಕಾನೂನುಬದ್ಧ ಹಕ್ಕನ್ನು ಹೊಂದಿದ್ದಾರೆ ಮತ್ತು ಅರ್ಜಿ ಸಲ್ಲಿಸಿದ ಜಮೀನಿನಲ್ಲಿ ವಿಭಜನೆ ಕೋರಲು ಹಕ್ಕುಳ್ಳವರಾಗಿರುವುದರಿಂದ, 2 ನೇ ಮತ್ತು 3 ನೇ ಪಕ್ಷಕಾರರಿಗೆ ಸಂಬಂಧಪಡುವಷ್ಟರಮಟ್ಟಿಗೆ ಅವರು ಕಾನೂನಿಗನುಸಾರವಾಗಿ ನಾಗರಿಕ ಪರಿಹಾರಗಳನ್ನು ಪಡೆಯಲು ಅವಕಾಶವನ್ನು ಕೋರಿದ್ದಾರೆ.ಈ ಕಾರಣಗಳ ಮೇರೆಗೆ, 1 ನೇ ಪ್ರತಿವಾದಿ/ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶವು ತಪ್ಪಾದುದಾಗಿದೆ ಮತ್ತು ಆದೇಶದಲ್ಲಿ ತಿಳಿಸಿರುವ ಯಾವುದೇ ಕಾರಣಗಳು ಸಹಾಯಕವಾಗಿರುವುದಿಲ್ಲ ಮತ್ತು ಅದು ಈ ನ್ಯಾಯಾಲಯದಿಂದ ರದ್ದುಗೊಳ್ಳಲು ಯೋಗ್ಯವಾಗಿದೆ ಎಂದು ಈ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದಾರೆ.

8. ಇದಕ್ಕೆ ತದ್ವಿರುದ್ಧವಾಗಿ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ತಿರಸ್ಕರಿಸಿ, ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಫೀಡರ್ ಅವರು ಈ ನ್ಯಾಯಾಲಯದ ಮುಂದೆ ನಿವೇದಿಸಿಕೊಂಡಿರುವುದೇನೆಂದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೆಕ್ಕಂಟಿ ರಮಾ ಲಕ್ಷ್ಮೀ ಮತ್ತು ವಿವೇಕ್ ಎಮ್. ಹಿಂದುಜಾ (ಮೇಲೆ ಹೇಳಿದ) ಮೊಕದ್ದಮೆಗಳಲ್ಲಿ ವಿಧಿಸಿದ ನಿಯಮವು ಪ್ರಸ್ತುತ ಮೊಕದ್ದಮೆಯಲ್ಲಿನ ಸಂಗತಿಗಳನ್ನು ಯಥಾವತ್ತಾಗಿ ಒಳಗೊಳ್ಳುತ್ತವೆಯಾದ್ದರಿಂದ ಹಾಗೂ ಅನುಬಂಧ-ಸಿ ಪ್ರಕಾರ 1 ನೇ ಪ್ರತಿವಾದಿ/ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶವು ಯಾವುದೇ ಕಾನೂನುಬಾಹಿರತೆಗೆ ಗುರಿಯಾಗುವುದಿಲ್ಲವಾದ್ದರಿಂದ, ಈ ನ್ಯಾಯಾಲಯದಿಂದ ಯಾವುದೇ ಹಸ್ತಕ್ಷೇಪವನ್ನು ಸಮರ್ಥಿಸುವುದಿಲ್ಲ.

9. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಹಾಗೂ 1 ನೇ ಮತ್ತು 2 ನೇ ಪ್ರತಿವಾದಿ ಪರ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಫೀಡರ್ ಅವರ ಚ ವಾದಗಳನ್ನು ನಾನು ಆಲಿಸಿದ್ದೇನೆ.ರಿಟ್ ಅರ್ಜಿಯಲ್ಲಿ ವಾದಿಸಿದ ಕಾರಣಗಳನ್ನು ನಾನು ಕೂಲಂಕಷವಾಗಿ ಪರಿಗಣಿಸಿದ್ದೇನೆ.ಶ್ರೀಮತಿ ಪಿ. ಕಮಲ -ವಿರುದ್ಧ ಕರ್ನಾಟಕ ರಾಜ್ಯ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ತೀರ್ಪನ್ನು ಮತ್ತು ಶ್ರೀಮತಿ ರೂಪಾ -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು (ಮೇಲೆ ಹೇಳದ) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠವು ನೀಡಿದ ತೀರ್ಪನ್ನು ನಾನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ.

10. ಪರಿಗಣನೆಗಾಗಿ ಉದ್ಭವಿಸುವ ಅಂಶಗಳು ಈ ಮುಂದಿನಂತಿವೆ:

" 1) ಅರ್ಜಿ ಸಲ್ಲಿಸಿದ ಜಮೀನುಗಳ ಮರುಸ್ವಾಧೀನ ಕೋರಿ, ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸುವಲ್ಲಿ ಆದ ಅತಿಯಾದ ವಿಳಂಬವನ್ನು ವಿವರಿಸಲು ಕಾಲ ಪರಿಮಿತಿ ಅಧಿನಿಯಮದ 5 ನೇ ಪ್ರಕರಣದ ಉಪಬಂಧಗಳನ್ನು ಅನ್ವಯಿಸಲು ಅರ್ಜಿದಾರರು ಹಕ್ಕುಳ್ಳವರಾಗಿರುವರೇ?

2) ನೆಕ್ಕಂಟಿ ರಮಾ ಲಕ್ಷ್ಮೀ -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು, ವಿವೇಕ್ ಎಮ್. ಹಿಂದುಜಾ -ವಿರುದ್ಧ-ಎಮ್.ಅಶ್ವಥ ಹಾಗೂ ಜಗದೀಶ್ ವಿರುದ್ಧ ಕರ್ನಾಟಕ ರಾಜ್ಯ ' ಮೊಕದ್ದಮೆಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಚ ತತ್ತ್ವಗಳು, ಯುಕ್ತ ಸಮಯವನ್ನು ಮೀರಿ ಕ್ರಮ ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಲು ಜಮೀನು ಪಡೆದವನಿಗೆ ಹಕ್ಕನ್ನು ನೀಡುತ್ತವೆಯೇ?

3) ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ಅರ್ಜಿದಾರರು ಸಲ್ಲಿಸಿದ ಅರ್ಜಿಯು, ಅನಗತ್ಯ ವಿಳಂಬದ ಕಾರಣದ ಮೇರೆಗೆ ಸಮರ್ಥನೀಯವಲ್ಲವೇ?

7. 2019 ಎಸ್ಸಿಸಿ ಆನ್ಲೈನ್ ಎಸ್ಸಿ 1901

ಪರಾಮರ್ಶನೆ:1 ರಿಂದ 3 ರವರೆಗಿನ ಪರಿಶೀಲನಾಂಶಗಳು:

ಯುಕ್ತ ಅವಧಿ:

11. ಶ್ರೀಮತಿ ಪಿ. ಕಮಲ -ವಿರುದ್ಧ ಕರ್ನಾಟಕ ರಾಜ್ಯ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ನೀಡಿದ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ಅವಲಂಬಿಸಿ ಮತ್ತು ಹೆಚ್ಚುವರಿ ದಸ್ತಾವೇಜುಗಳನ್ನು ಸಹ ಅವಲಂಬಿಸಿ, O ಅರ್ಜಿದಾರರು, 2007 ನೇ ಸಾಲಿನಲ್ಲಿಯೇ ಕಂದಾಯ ದಾಖಲೆಗಳನ್ನು ಖರೀದಿದಾರನ ಹೆಸರಿಗೆ ಹಕ್ಕು ಬದಲಾವಣೆ ಮಾಡಲಾಗಿದ್ದರಿಂದ, 2007 ನೇ ಸಾಲಿನಲ್ಲಿಯೇ ವ್ಯಾಜ್ಯ ಕಾರಣವು ಉದ್ಭವಿಸಿತ್ತೆಂದು ವಾದಿಸಿದ್ದಾರೆ.ಆದ್ದರಿಂದ, ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸುವಲ್ಲಿ ಉಂಟಾದ ವಿಳಂಬಕ್ಕೆ ಸಂಬಂಧಿಸಿದಂತೆ ಈ ನ್ಯಾಯಾಲಯದ ಮುಂದೆ ವಿವರಣೆ ನೀಡಲು ಅರ್ಜಿದಾರರಿಗೆ ಸಾಧ್ಯವಾಗುವಂತೆ ಮಾಡುವ ಸಲುವಾಗಿ, ಅರ್ಜಿಯನ್ನು ಮರುವಿಚಾರಣೆಗೆ ಕಳುಹಿಸಲು ಕೋರುವ ಪ್ರಯತ್ನವನ್ನು ಅರ್ಜಿದಾರರು ಮಾಡಿದ್ದಾರೆ.ಜಗದೀಶ್ -ವಿರುದ್ಧ-ಕರ್ನಾಟಕ ರಾಜ್ಯ, ನೆಕ್ಕಂಟಿ ರಮಾ ಲಕ್ಷ್ಮಿ ಮತ್ತು ವಿವೇಕ್ ಎಮ್. ಹಿಂದುಜಾ (ಮೇಲೆ ಹೇಳದ) ಮೊಕದ್ದಮೆಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮದ ಹಿನ್ನೆಲೆಯಲ್ಲಿ, ಅರ್ಜಿದಾರರು ವಾದಿಸಿದ ಕಾರಣಗಳನ್ನು ಈ ನ್ಯಾಯಾಲಯವು ಪರಿಶೀಲಿಸಬೇಕಾದ ಅಗತ್ಯವಿದೆ.

12. ಜಗದೀಶ್ -ವಿರುದ್ಧ ಕರ್ನಾಟಕ ರಾಜ್ಯ (ಮೇಲೆ ಹೇಳದ) ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸತ್ಯನ್ ವಿರುದ್ಧ ಜಿಲ್ಲಾಧಿಕಾರಿಗಳು ಮೊಕದ್ದಮೆಯನ್ನು ಉಲ್ಲೇಖಿಸುವಾಗ, ಇತ್ಯರ್ಥಗೊಂಡ ವ್ಯವಹಾರಗಳಿಗೆ ದೀರ್ಘಾವಧಿಯ ನಂತರ ಅಡಚಣೆಯನ್ನುಂಟು ಮಾಡಲು ಅನುಮತಿಸಲಾಗುವುದಿಲ್ಲ ಎಂದು ಅಭಿಪ್ರಾಯಪಟ್ಟಿತ್ತು.ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಹ ಪಿಟಿಸಿಎಲ್ ಚ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು

8. ಎಐಆರ್ 2019 ಎಸ್ಸಿ 797

ಕುರಿತು ವ್ಯವಹರಿಸುವ ಸಂದರ್ಭವನ್ನು ಸಹ ಹೊಂದಿತ್ತು.ಸಂಬಂಧಪಟ್ಟ ಕಂಡಿಕೆಯನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ:

"12. ಇನಾಮ್ ರದ್ದತಿ ಅಧಿನಿಯಮ ಹಾಗೂ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಅಧಿನಿಯಮಗಳನ್ನು ಪರಸ್ಪರ ಪದ್ಯಾಲೋಚಿಸುವ ಅಗತ್ಯವಿರುವ ಹಲವಾರು ವಿವಾದಗಳನ್ನು ನಮ್ಮ ಮುಂದೆ ಎತ್ತಲಾಗಿದೆ.ಆದಾಗ್ಯೂ, ನಮ್ಮ ಪ್ರಕಾರ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಅಧಿನಿಯಮ ಜಾರಿಗೆ ಬಂದ ಮೂರು ದಶಕಗಳ ನಂತರ, ಅಪೀಲುದಾರರು ಸಂಬಂಧಪಟ್ಟ ಪ್ರಾಧಿಕಾರಗಳ ಬಾಗಿಲನ್ನು ತಟ್ಟಿದ್ದಾರೆಂಬ ಚಿಕ್ಕ ಕಾರಣದ ಮೇಲೆ, ಯಾವುದೇ ಪರಿಹಾರ ಪಡೆಯುವುದರಿಂದ ಅವರನ್ನು ಅನರ್ಹಗೊಳಿಸಲಾಗಿರುವುದರಿಂದ, ಅವುಗಳನ್ನು ಪರಿಶೀಲಿಸುವ ಅವಶ್ಯಕತೆ ನಮಗೆ ಕಂಡುಬರಲಿಲ್ಲ.ಹಲವು ತೀರ್ಪುಗಳಲ್ಲಿ ಮತ್ತು ಅಂತಿಮವಾಗಿ ಸತ್ಯನ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಇದೇ ಅಂಶವು ಚರ್ಚೆಯ ವಸ್ತುವಿಷಯವಾಗಿದೆ ( ಈ ಅಂಶಗಳನ್ನು ಚರ್ಚಿಸಲಾಗಿದ್ದು ಇದರಲ್ಲಿ ಮೇಲೆ 12 ನೇ ಕಂಡಿಕೆಯಲ್ಲಿ ಉಲ್ಲೇಖಿಸಲಾಗಿದೆ). ಯಾವುದೇ ಕಾಲ ಪರಿಮಿತಿಯನ್ನು ನಿಗದಿಪಡಿಸಿರಲಿಲ್ಲವೆಂದು ಗುರುತಿಸಲಾಗಿದ್ದರೂ ಸಹ, ಯುಕ್ತ ಕಾಲಾವಧಿಯೊಳಗೆ ಹಕ್ಕನ್ನು ಚಲಾಯಿಸಬೇಕಾಗಿತ್ತು.ಈ ಸಂದರ್ಭದ ಹಿನ್ನೆಲೆಯಲ್ಲಿ, ಸಂಬಂಧಪಟ್ಟ ಪ್ರಾಧಿಕಾರಗಳು ಹಸ್ತಕ್ಷೇಪ ಮಾಡುವ ಅಗತ್ಯಕ್ಕೆ ಸಂಬಂಧಿಸಿದಂತೆ 20 ವರ್ಷಗಳ ಅವಧಿಯನ್ನು, ಅತ್ಯಂತ ದೀರ್ಘಾವಧಿ ಎಂದು ಹೇಳಲಾಗಿದೆ.ಸದರಿ ಅವಧಿಯನ್ನು ಬಿಟ್ಟುಬಿಡೋಣ, ಪ್ರಸ್ತುತ ಮೊಕದ್ದಮೆಯಲ್ಲಿ, ಹಕ್ಕುಗಳ ಪ್ರಾಪ್ತಿ ಮತ್ತು ಹಕ್ಕುಗಳ ಚಲಾವಣೆ ನಡುವೆ 30 ವರ್ಷಗಳ ಅವಧಿಯ ವಾಸ್ತವಿಕ ಸನ್ನಿವೇಶದೊಂದಿಗೆ ನಾವು ಮುಖಾಮುಖಿಯಾಗಿದ್ದೇವೆ.ಈ ನಡುವೆ, ಜಮೀನುಗಳನ್ನು ಖಾಸಗಿ ಪ್ರತಿವಾದಿಗಳು ಅಭಿವೃದ್ಧಿಪಡಿಸಿದ್ದು, ನಮ್ಮ ಪ್ರಕಾರ, ಅವರು ಜಮೀನಿನ ನಿಜವಾದ ಖರೀದಿದಾರರಾಗಿದ್ದಾರೆ ಮತ್ತು ಅದರಲ್ಲಿ ಮೂಲಸೌಕರವನ್ನು

ಸೃಜಿಸಿದ್ದಾರೆ.ಪ್ರಶ್ನಿತ ಜಮೀನಿನಲ್ಲಿ ನಿರ್ಮಿಸಲಾದ ನಿರ್ಮಿತಿಯ ಸ್ವರೂಪದ ಬಗ್ಗೆ ಸಂಪೂರ್ಣವಾಗಿ ಅರಿವಿದ್ದೇ, ಸ್ವಲ್ಪ ಪ್ರಮಾಣದ ಮೊತ್ತವನ್ನು ಪಡೆಯುವುದು ಮಾತ್ರವೇ ಅಪೀಲುದಾರನ ಪ್ರಯತ್ನವಾಗಿದೆ ಎಂಬುದು ಈಗ ಕಂಡುಬರುತ್ತಿದೆ.ನಾವು ಅಂಥ ಪ್ರಯತ್ನದ ಭಾಗವಾಗಿರಲಾಗುವುದಿಲ್ಲ.ಆದ್ದರಿಂದ, ಮೇಲೆ ಚರ್ಚಿಸಿದ ಕಾನೂನಿನ ನಿಲುವಿನ ಒಟ್ಟಾರೆ ದೃಷ್ಟಿಕೋನ ಮತ್ತು ನಾವು ಉಲ್ಲೇಖಿಸಿದ ಸಂಗತಿಗಳ ಹಿನ್ನೆಲೆಯಲ್ಲಿ, ತಮ್ಮ ಪರಿಹಾರದ ಲಭ್ಯತೆಗೆ ಕೋರುವಲ್ಲಿ ಆರಂಭದ ಹಂತದಲ್ಲೇ ಅತ್ಯಂತ ಹೆಚ್ಚು ವಿಳಂಬ ಮಾಡಿರುವ ಚಿಕ್ಕ ಕಾರಣದ ಮೇಲೆ ಯಾವುದೇ ಚ ಪರಿಹಾರಕ್ಕೆ ಅಪೀಲುದಾರರು ಅನರ್ಹರಾಗಿದ್ದಾರೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.ಪ್ರಸ್ತುತ ಅಪೀಲುಗಳಲ್ಲಿ ಎತ್ತಿದ ಇತರ ಅಂಶಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ಪ್ರಸ್ತುತ ವಿವಾದದ ಮುಂದೂಡಿಕೆಗೆ ಅದೇ ಅಭಿಪ್ರಾಯ ನೀಡಬೇಕಾದ ಅಗತ್ಯ ನಮಗೆ ಇಲ್ಲದೆ ಇರುವುದರಿಂದ, ನಾವು ಕಾನೂನಿನ ಪ್ರಶ್ನೆಗಳನ್ನು ಮುಕ್ತವಾಗಿರಿಸಿದ್ದೇವೆ. "

13. ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಮೇಲೆ ಉಲ್ಲೇಖಿಸಿದ ತೀರ್ಪಿನಲ್ಲಿ, ವರ್ಗಾವಣೆ ಪಡೆದವನಿಂದ ರದ್ದುಗೊಳಿಸಬಹುದಾದ ಸ್ವಾಮ್ಯ ಮತ್ತು ಜಮೀನುಗಳ ಪುನರ್ವಶ ಕೋರದೆ, ವರ್ಗಾವಣೆ ಪಡೆದವನ ಕಡೆಯಿಂದಾದ ಒಟ್ಟಾರೆ ನಿಷ್ಕ್ರಿಯತೆ ಕುರಿತು ವ್ಯವಹರಿಸಿದೆ.ವರ್ಗಾವಣೆ ಪಡೆದವನು ರದ್ದುಗೊಳಿಸಬಹುದಾದ ಸ್ವಾಮ್ಯವನ್ನು ಪಡೆದಿದ್ದನಾದರೂ, ದೀರ್ಘ ವಿಳಂಬದ ಕಾರಣದಿಂದ, ಪ್ರಾಧಿಕಾರವು ಸ್ವಯಂಪ್ರೇರಣೆಯಿಂದಾಗಲಿ ಅಥವಾ ಬಾಧಿತ ಪಕ್ಷಕಾರರಾಗಲಿ ಜಮೀನುಗಳ ಮರುಸ್ವಾಧೀನ ಕೋರಲಾಗುವುದಿಲ್ಲವೆಂಬ ಕಾರಣಕ್ಕೆ ಸ್ವತ್ತನ್ನು ಅನುಭೋಗಿಸುವುದಕ್ಕೆ ಆತನಿಗೆ ಅನುಮತಿ ನೀಡಲಾಗಿತ್ತು ಎಂಬುದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಚ ಅಭಿಪ್ರಾಯವಾಗಿತ್ತು.

14. ನೆಕ್ಕಂಟಿ ರಮಾ ಲಕ್ಷ್ಮಿ ಮತ್ತು ವಿವೇಕ್ ಎಮ್. ಹಿಂದುಜಾ (ಮೇಲೆ ಹೇಳಿದ) ಮೊಕದ್ದಮೆಗಳಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಯುಕ್ತ ಅವಧಿ ಎಂಬುದು ಚ ಏನನ್ನು ಒಳಗೊಳ್ಳುತ್ತದೆ ಎಂಬ ವಿಷಯವನ್ನು ಕುರಿತು ವ್ಯವಹರಿಸಿದೆ.ಎರಡೂ ತೀರ್ಪುಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಯುಕ್ತ ಅವಧಿ ಏನನ್ನು ಚ ಒಳಗೊಳ್ಳುತ್ತದೆ ಎಂಬುದನ್ನು ಕುರಿತು ವ್ಯವಹರಿಸಿದೆ.

15. ಪ್ರಸ್ತುತ ಮೊಕದ್ದಮೆಯ ಸಂಗತಿಗಳನ್ನು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮದ ಹಿನ್ನೆಲೆಯಲ್ಲಿ ಪರಿಶೀಲಿಸಿದರೆ, ಅರ್ಜಿದಾರರು ಕಾಲಪರಿಮಿತಿ ಅಧಿನಿಯಮದ ಉಪಬಂಧಗಳನ್ನು ಅವಲಂಬಿಸಬಹುದೇ ಮತ್ತು ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಉಪಬಂಧಗಳ ಮೇರೆಗೆ ಕ್ರಮವನ್ನು ಪ್ರಾರಂಭಿಸದೇ ಇರುವಲ್ಲಿ ಉಂಟಾದ ಅತಿಯಾದ ವಿಳಂಬಕ್ಕೆ ಸಂಬಂಧಿಸಿದಂತೆ ವಿವರಣೆಯನ್ನು ನೀಡಬೇಕೇ ಎಂಬುದು ಪ್ರಸ್ತುತ ಮೊಕದ್ದಮೆಯಲ್ಲಿ ಪರಿಶೀಲಿಸಬೇಕಾದ ಅವಶ್ಯಕತೆ ಇರುವ ಪ್ರಶ್ನೆಯಾಗಿದೆ.ಸರ್ವೋಚ್ಚ ನ್ಯಾಯಾಲಯವು ಮೇಲ್ಕಂಡ ತೀರ್ಪಿನಲ್ಲಿ ವಿಧಿಸಿರುವ ತತ್ವಗಳು, ಸಾರ್ವಜನಿಕ ನೀತಿ ಮತ್ತು ವಿಹಿತತೆಯನ್ನು ಆಧರಿಸಿವೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಪರಿಹಾರವನ್ನು ನಿರ್ಬಂಧಿಸಲಾಗಿದೆ ಎಂದು ಸರಳವಾಗಿ ಘೋಷಿಸಿರುವುದು ಮಾತ್ರವಲ್ಲದೆ, ವರ್ಗಾವಣೆಗೊಂಡವರ ಪರವಾಗಿ ಹಕ್ಕು ವಿಹಿತಗೊಂಡಿರುತ್ತದೆ ಎಂದು ಪೂರ್ವೋಕ್ತ ತೀರ್ಪುಗಳಿಂದ ತಿಳಿದುಬರುತ್ತದೆ.ಯುಕ್ತ ಅವಧಿಯ ನಂತರ, ಜಮೀನಿನ ಪುನರ್ವಶ ಕೋರುವ ಹಕ್ಕು ಮತ್ತು ಪರಿಹಾರಗಳೆರಡೂ ಕಳೆದು ಹೋಗುತ್ತವೆ ಎಂಬುದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯವಾಗಿತ್ತು.

16. ನೆಕ್ಕಂಟಿ ರಮಾ ಲಕ್ಷ್ಮಿ ಮತ್ತು ವಿವೇಕ್ ಎಮ್. ಹಿಂದುಜಾ (ಮೇಲೆ ಹೇಳಿದ) ಮೊಕದ್ದಮೆಗಳಲ್ಲಿ ಅಭಿಪ್ರಾಯಪಟ್ಟಿರುವಂತೆ, ಯುಕ್ತ ಅವಧಿಯ ತತ್ವವನ್ನು ಅರ್ಥ ಮಾಡಿಕೊಂಡು, ಅತಿಯಾದ ವಿಳಂಬದ ಕಾರಣವು, ಅರ್ಜಿಯನ್ನು ಯುಕ್ತ ಅವಧಿಯನ್ನು ಮೀರಿ ಸಲ್ಲಿಸಿದರೆ, ಅದು ಜಮೀನಿನ ಸ್ವಾಧೀನವನ್ನು ಪುನಃ ನೀಡಲು, ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ಕ್ರಮವನ್ನು ಕೈಗೊಳ್ಳುವ ವರ್ಗಾವಣೆ ಪಡೆದವನ ಹಕ್ಕನ್ನು ತಪ್ಪಿಸುವುದಲ್ಲದೆ, ಸ್ವಾಧೀನ ಪಡೆದವನೊಂದಿಗೆ ಸ್ವಾಮ್ಯವನ್ನು ನಿಹಿತಗೊಳಿಸುತ್ತದೆ, ಎಂದರೆ, ಜಗದೀಶ್ -ವಿರುದ್ಧ ಕರ್ನಾಟಕ ರಾಜ್ಯ (ಮೇಲೆ ಹೇಳದ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಂತೆ, ರದ್ದುಗೊಳಿಸಬಹುದಾದ ಸ್ವಾಮ್ಯವನ್ನು ಆರ್ಜಿಸಿರುವ ವರ್ಗಾವಣೆ ಪಡೆದವನಲ್ಲಿ ಆ ಹಕ್ಕನ್ನು ಸಹ ನಿಹಿತಗೊಳ್ಳುತ್ತದೆ ಎಂಬ ಪರಿಣಾಮವನ್ನು ಅರ್ಥೈಸಬೇಕಾಗುತ್ತದೆ.ನೆಕ್ಕಂಟಿ ರಮಾ ಲಕ್ಷ್ಮಿ, ವಿವೇಕ್ ಎಮ್. ಹಿಂದುಜಾ, ಜಗದೀಶ್ -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಛೇದಿ ಲಾಲ್ ಯಾದವ್ (ಮೇಲೆ ಹೇಳದ) ಮೊಕದ್ದಮೆಗಳಲ್ಲಿ ಮಾನ್ಯ ಸರ್ವೋಚ್ಚ

ನ್ಯಾಯಾಲಯವು ನೀಡಿದ ತೀರ್ಪುಗಳು, ಯುಕ್ತ ಅವಧಿಯ ತತ್ತ್ವವು, ತನ್ನ ಹಕ್ಕನ್ನು ಸ್ಥಿರೀಕರಿಸಲು ನಿರ್ಲಕ್ಷಿಸಿದ ವರ್ಗಾವಣೆ ಪಡೆದವನನ್ನು ದಂಡಿಸುವುದಿಲ್ಲವಾದರೂ, ಮೌಲಿಕ ಮಾರಾಟ ಪ್ರತಿಫಲಕ್ಕೆ ನೋಂದಾಯಿತ ದಸ್ತಾವೇಜಿನ ಮೇರೆಗೆ ಸ್ವತ್ತಿನ ಸ್ವಾಧೀನವನ್ನು ನಿರ್ವಹಿಸುವ ವರ್ಗಾವಣೆ ಪಡೆದಂಥವರನ್ನು ರಕ್ಷಿಸಲು ಅನ್ವಯವಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ.ಆದುದರಿಂದ, ಮಂಜೂರಾತಿ ಪಡೆದವನು ವಿಳಂಬ ಕುರಿತು ವಿವರಿಸುವ ಅವಕಾಶವನ್ನು ಕೋರುವ ಮೂಲಕ ತನ್ನ ಹಕ್ಕನ್ನು ಮನಃ ಪಡೆಯಲಾಗುವುದಿಲ್ಲ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ.ಆದುದರಿಂದ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ, ಶ್ರೀಮತಿ ಪಿ. ಕಮಲ -ವಿರುದ್ಧ ಕರ್ನಾಟಕ ರಾಜ್ಯ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಅರ್ಜಿದಾರರು ಅವಲ ೦ ಬಿಸಿರುವ ವಿಭಾಗೀಯ ಪೀಠದ ತೀರ್ಪನ್ನು ಪರಿಗಣಿಸಲಾಗುವುದಿಲ್ಲ.

17. ಭಾರತ ಸಂವಿಧಾನದ 141 ನೇ ಮತ್ತು 144 ನೇ ಅನುಚ್ಛೇದಗಳ ಪ್ರಕಾರ, ಭಾರತದ ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ನಿಯಮವು, ಹಾಗೆ ಘೋಷಿಸಿದ ಚ ನಿಯಮದ ಉದ್ದೇಶದಂತೆ ಕಾರನಿರ್ವಹಿಸಬೇಕಾದ ಎಲ್ಲಾ ನ್ಯಾಯಾಲಯಗಳಿಗೆ ಮತ್ತು ಎಲ್ಲಾ ಪ್ರಾಧಿಕಾರಗಳಿಗೆ ಬಂಧನಕಾರಿಯಾಗಿದೆ.ಆದುದರಿಂದ, ಮೇಲೆ ಹೇಳಿದ ತೀರ್ಪುಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿವರಿಸಿದ ಯುಕ್ತ ಅವಧಿಯ ತತ್ತ್ವವನ್ನು, ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಉಪಬಂಧಗಳ ಅಡಿಯಲ್ಲಿ ಜಮೀನಿನ ಪುನರ್ವಶ ಕೋರಿ ಖಾತರಿದಾರನು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸುವಾಗ ಪ್ರಾಧಿಕಾರಗಳು ಪರಿಶೀಲಿಸಬೇಕಾಗುತ್ತದೆ.ಆದುದರಿಂದ, ಶ್ರೀಮತಿ ರೂಪಾ –ವಿರುದ್ಧ ಕರ್ನಾಟಕ ರಾಜ್ಯ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಅರ್ಜಿದಾರರು ಉಲ್ಲೇಖಿಸಿದ ಸಮನ್ವಯ ಪೀಠದ ತೀರ್ಪು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ತತ್ತ್ವಗಳಿಗೆ ಹಾಗೂ ರಿಟ್ ಅರ್ಜಿಸಂಖ್ಯೆ: 16/2021 ರಲ್ಲಿ ಒಂಭತ್ತು ವರ್ಷಗಳ ನಂತರ ಸಲ್ಲಿಸಿದ ಅರ್ಜಿಯು ಕಾಲೋಚಿತವಾಗಿರುವುದಿಲ್ಲ ಎಂದು ಅಭಿಪ್ರಾಯಪಟ್ಟಿರುವ ವಿಭಾಗೀಯ ಪೀಠದ ತೀರ್ಪಿಗೂ ಅನುಸಾರವಾಗಿಲ್ಲ ಎಂದು ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆದೇಶವನ್ನು, ವಿಭಾಗೀಯ ಪೀಠವು ಸ್ಥಿರೀಕರಿಸಿತ್ತು.ಆದುದರಿಂದ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮಗಳು ಈ ನ್ಯಾಯಾಲಯಕ್ಕೆ ಬಂಧನಕಾರಿಯಾಗಿರುವುದರಿಂದ, ಸಮನ್ವಯ ಪೀಠವು ಹಾಗೂ ವಿಭಾಗೀಯ ಪೀಠವು ನೀಡಿದ ತೀರ್ಪುಗಳನ್ನು ಪರಾಮರ್ಶಿಸುವ ಅವಶ್ಯಕತೆ ಇಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ.

ವ್ಯಾಜ್ಯದ ಕಾರಣ

18. ವರ್ಗಾವಣೆ ಪಡೆದವನು 2007 ನೇ ಸಾಲಿನಲ್ಲಿ ತನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಿಕೊಂಡಿರುವುದರಿಂದ, 2007 ನೇ ಸಾಲಿನಲ್ಲಿ ವ್ಯಾಜ್ಯದ ಕಾರಣ ಉದ್ಭವಿಸಿದೆ ಎಂಬ ವಾದವನ್ನು ಸಾಧಿಸಲು ಅರ್ಜಿದಾರರು ಪ್ರಯತ್ನಿಸಿರುವರಾದರೂ, 2007 ನೇ ಸಾಲಿನಲ್ಲಿ ವ್ಯಾಜ್ಯದ ಕಾರಣ ಉದ್ಭವಿಸಿತ್ತೆಂಬುದನ್ನು ಒಪ್ಪಲಾಗುವುದಿಲ್ಲ.1 ನೇ, 4 ನೇ, 5 ನೇ ಅರ್ಜಿದಾರರು ಮತ್ತು 5 ನೇ ಪ್ರತಿವಾದಿಗಳುದಿನಾಂಕ: 24.08.1993 ರಂದು 3 ನೇ ಪ್ರತಿವಾದಿಯ ಹೆಸರಿಗೆ ನೋಂದಾಯಿತ ಕ್ರಯಪತ್ರವನ್ನು ಬರೆದುಕೊಟ್ಟಿದ್ದಾರೆ.ಅರ್ಜಿದಾರರು ಸ್ವಾಮ್ಯವನ್ನು ಕಳೆದುಕೊಂಡಿರುವುದು ಮಾತ್ರವಲ್ಲದೆ, 1993 ರಲ್ಲಿ ಕ್ರಯಪತ್ರಕ್ಕನುಸಾರ ಸ್ವಾಧೀನವನ್ನು ವರ್ಗಾಯಿಸಿರುವುದರಿಂದ, ಅರ್ಜಿದಾರರು ಆರೋಪಿಸಿದಂತೆ, ಆರೋಪಿತ ತರುವಾಯದ ವ್ಯಾಜ್ಯದ ಕಾರಣವು, ಮೊದಲ ಸಲ, ವಾದ-ಪ್ರತಿವಾದದ ಪತ್ರಗಳಲ್ಲಿರದೆ ಮೌಖಿಕವಾಗಿದ್ದು, ಅದನ್ನು ಪುರಸ್ಕರಿಸಲಾಗುವುದಿಲ್ಲ.

19. ಅರ್ಜಿದಾರರು, ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ಜಮೀನಿನ ಪುನರ್ವಶ ಕೋರಿ ಅರ್ಜಿ ಸಲ್ಲಿಸಿರುವರೇ ಎಂಬುದನ್ನು ನಿರ್ಧರಿಸುವ ಸಲುವಾಗಿ, ವರ್ಗಾವಣೆ ಪಡೆದವನು 2007 ನೇ ಸಾಲಿನಲ್ಲಿ ಕಂದಾಯ ದಾಖಲೆಗಳಲ್ಲಿ ತನ್ನ ಹೆಸರಿಗೆ ವರ್ಗಾಯಿಸಿಕೊಂಡಾಗ ವ್ಯಾಜ್ಯದ ಕಾರಣವು ಉದ್ಭವಿಸಿದೆ ಎಂದು ಈ ನ್ಯಾಯಾಲಯದ ಮುಂದೆ ವಾದವನ್ನು ಸಮರ್ಥಿಸಿಕೊಳ್ಳಲು ಅರ್ಜಿದಾರರು ಪ್ರಯತ್ನಿಸಿರುವುದರಿಂದ, ದಾವೆ ಹೂಡುವ ಹಕ್ಕು ಮೊದಲ ಬಾರಿಗೆ ಯಾವಾಗ ಉದ್ಭವಿಸಿತು ಎಂಬುದನ್ನು ಈ ನ್ಯಾಯಾಲಯವು ವಿಶ್ಲೇಷಿಸಬೇಕಿದೆ.ವ್ಯಾಜ್ಯದ ಕಾರಣವು ತರುವಾಯದ ಸಂದರ್ಭದಲ್ಲೂ ಸಹ ಉದ್ಭವಿಸಬಹುದಾಗಿತ್ತಾದರೂ, ಯುಕ್ತ ಅವಧಿಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ದಾವೆ ಹೂಡುವ ಹಕ್ಕು

ಮೊದಲ ಸಲ ಉದ್ಭವಿಸಿದ ದಿನಾಂಕವು ಮುಖ್ಯವಾಗುತ್ತದೆ ಎಂಬುದರಲ್ಲಿ ಸಂಶಯದ ಲವಲೇಶವೂ ಇರುವುದಿಲ್ಲ.ದಾಖಲೆಯಲ್ಲಿನ ಸಾಕ್ಷ್ಯಗಳು, ಅರ್ಜಿದಾರರುದಿನಾಂಕ: 24.08.1993 ರಂದು 3 ನೇ ಪ್ರತಿವಾದಿಗೆ ಅರ್ಜಿ ಸಲ್ಲಿಸಿದ ಜಮೀನನ್ನು ಮಾರಾಟ ಮಾಡಿದ್ದಾರೆ ಮತ್ತು ಸ್ವಾಮ್ಯವನ್ನು ಸಹ ವರ್ಗಾಯಿಸಿದ್ದಾರೆ ಎಂಬುದನ್ನು ಸೂಚಿಸುತ್ತವೆ.ಆದುದರಿಂದ, ಕ್ರಯಪತ್ರವನ್ನು ಬರೆದುಕೊಟ್ಟ ದಿನಾಂಕದಿಂದಲೇ ಮರುಸ್ವಾಧೀನ ಕೋರುವ ಹಕ್ಕು ಪ್ರಾರಂಭವಾಗುತ್ತದೆ.ಮಂಜೂರಾತಿ ಷರತ್ತುಗಳಿಗೆ ವಿರುದ್ಧವಾಗಿ ಮತ್ತು ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಉಪಬಂಧಗಳಿಗೆ ವಿರುದ್ಧವಾಗಿ ಪರಭಾರೆ ಮಾಡಿರುವ ಕಾರಣದಿಂದ ಈಗಾಗಲೇ ಉಲ್ಲಂಘನೆಯಾಗಿರುವುದರಿಂದ, 2007 ರಲ್ಲಿ ವ್ಯಾಜ್ಯದ ಕಾರಣವು ಉದ್ಭವಿಸಿದೆ ಎಂಬ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ಒಪ್ಪಲು ಈ ನ್ಯಾಯಾಲಯಕ್ಕೆ ಸಾಧ್ಯವಾಗುವುದಿಲ್ಲ.1993 ರಲ್ಲಿ ಪರಭಾರೆ ಮಾಡಲಾಗಿದ್ದರೆ, ಖಾತಾದಲ್ಲಿ ಬದಲಾವಣೆಗಳನ್ನು ಜಾರಿಗೊಳಿಸಲು ವರ್ಗಾವಣೆ ಪಡೆದವನು ಅರ್ಜಿ ಸಲ್ಲಿಸಿರುವುದನ್ನು, ನಿಖರ ಭಾವದಲ್ಲಿ ಅರ್ಜಿದಾರರ/ಖಾತರಿದಾರರ ಹಕ್ಕಿನ ಮೇಲಿನ ಅತಿಕ್ರಮಣ ಅಥವಾ ನಿರಾಕರಣೆ ಎ ೦ ಬುದಾಗಿ ಪರಿಗಣಿಸಬೇಕೆಂದಾಗುವುದಿಲ್ಲ.ಹಕ್ಕು ಬದಲಾವಣೆ ವ್ಯವಹರಣೆಗಳ ಮೇರೆಗೆ, ನೋಂದಾಯಿತ ದಸ್ತಾವೇಜನ್ನಾಧರಿಸಿರುವ ಖಾತಾ ಬದಲಾವಣೆಯನ್ನು, ಅರ್ಜಿದಾರರ ಹಕ್ಕನ್ನು ಉಲ್ಲಂಘಿಸುವ ಆತಂಕ ಎಂಬುದಾಗಿ ಅರ್ಥೈಸಲಾಗುವುದಿಲ್ಲ.ಆದುದರಿಂದ, ಅರ್ಜಿದಾರರು ನಿರೂಪಿಸಿದ ವ್ಯಾಜ್ಯದ ಕಾರಣವು ಕಲ್ಪನೆಯಾಗಿ ಕಂಡುಬರುತ್ತದೆ.ಕ್ರಮ ಕೋರುವ ಹಕ್ಕು 1993 ರಲ್ಲಿ ಮೊದಲ ಸಲ ಉದ್ಭವಿಸಿತ್ತಾದ್ದರಿಂದ, ಲೆಕ್ಕಹಾಕಬೇಕಾದ ಅವಧಿಯು, ಒಪ್ಪಿಕೊಂಡಿರುವಂತೆ 1993 ನೇ ಸಾಲಿನಲ್ಲಿ ಆದ ಮಾರಾಟದ ದಿನಾಂಕದಿಂದ ಇದೆಯೇ ಹೊರತು, ವರ್ಗಾವಣೆ ಪಡೆದವನು ಖಾತಾ ಬದಲಾವಣೆ ಕೋರಿದ್ದ 2007 ರಿಂದಲ್ಲ.ಆದುದರಿಂದ, ವ್ಯಾಜ್ಯದ ಕಾರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಎತ್ತಿದ ವಾದಗಳಲ್ಲಿ ಯಾವುದೇ ಹುರುಳಿಲ್ಲ ಮತ್ತು ಅದನ್ನು ಈ ಹಂತದಲ್ಲಿ ಪುರಸ್ಕರಿಸಲಾಗುವುದಿಲ್ಲ.

20. 2014-15ನೇ ಸಾಲಿನಲ್ಲಿ 2 ನೇ ಪ್ರತಿವಾದಿಗಳ ವಿಭಾಗಾಧಿಕಾರಿಗಳ ಮುಂದೆ ಅರ್ಜಿದಾರರು ಪುನರ್ವಶ ಕೋರಿ ಅರ್ಜಿಯನ್ನು ಸಲ್ಲಿಸಿದ್ದರು.ಅದಕ್ಕೆ ಯಾವುದೇ ವಿವರಣೆ ನೀಡಲಿಲ್ಲ.ರಿಟ್ ಅರ್ಜಿಯಲ್ಲೂ ಸಹ, ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಉಪಬಂಧಗಳ ಅಡಿಯಲ್ಲಿ ಕ್ರಮ ಕೋರುವಲ್ಲಿ ಅರ್ಜಿದಾರರು ಅಲ್ಲಗಳೆದಿರುವ ಅಗತ್ಯ ಕಾರಣಗಳಿಗೆ ಸಂಬಂಧಿಸಿದಂತೆ ಏನನ್ನು ಹೇಳಿರುವುದಿಲ್ಲ.ಅರ್ಜಿದಾರರು ಹೆಚ್ಚುವರಿ ದಸ್ತಾವೇಜುಗಳನ್ನು ಹಾಜರುಪಡಿಸಲು ಕೋರಿ ಅರ್ಜಿಯನ್ನು ಸಲ್ಲಿಸಿದ್ದಾರೆ.ಆದಾಗ್ಯೂ, ಹೆಚ್ಚುವರಿ ದಸ್ತಾವೇಜುಗಳ ಸಮರ್ಥನೆಗೆ ಯಾವುದೇ ಆಧಾರವನ್ನು ಒದಗಿಸಿಲ್ಲ.ಅನುಬಂಧ- ಇ ಮತ್ತು ಎಫ್ ಪ್ರಕಾರ ಹಾಜರುಪಡಿಸಿದ ಹೆಚ್ಚುವರಿ ದಸ್ತಾವೇಜುಗಳು, ಪಕ್ಷಕಾರರ ನಡುವಿನ ವಿವಾದವನ್ನು ನಿರ್ಧರಿಸುವುದಕ್ಕೆ ಸಂಬಂಧಪಟ್ಟಿರುವುದಿಲ್ಲ.ಈ ದಸ್ತಾವೇಜುಗಳು ಯಾವುದೇ ರೀತಿಯಲ್ಲೂ ಸೂಕ್ತ ಅವಧಿಯ ಸಿದ್ಧಾಂತವನ್ನು ಸಾಧಿಸಲು ಅರ್ಜಿದಾರರಿಗೆ ಸಹಾಯಕವಾಗಿರುವುದಿಲ್ಲ.ಅರ್ಜಿಯಲ್ಲೂ ಸಹ, ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಉಪಬಂಧಗಳ ಮೇರೆಗೆ ಕ್ರಮವನ್ನು ಜಾರಿಗೊಳಿಸುವಲ್ಲಿ ಆದ ಅತಿಯಾದ ವಿಳಂಬಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ನಿರುಪಾಧಿಕವಾಗಿ ಒಂದು ಮಾತನ್ನೂ ಹೇಳಿರುವುದಿಲ್ಲ.

21. ಅರ್ಜಿದಾರರು ತಮ್ಮ ಸ್ವಾಮ್ಯವನ್ನು ಕಳೆದುಕೊಂಡಿದ್ದರೆ, ವಿಳಂಬಕ್ಕೆ ಸಂಬಂಧಿಸಿದಂತೆ ಆಧಾರ ಒದಗಿಸುವ ಮತ್ತು ವಿವರಣೆ ನೀಡುವ ಪ್ರಶ್ನೆಯನ್ನು ಪುರಸ್ಕರಿಸಲಾಗುವುದಿಲ್ಲ.ಸೂಕ್ತ ಅವಧಿಯನ್ನು ಮೀರಿ ಪುನರ್ವಶ ಕೋರಿ ಅರ್ಜಿಯನ್ನು ಸಲ್ಲಿಸಿದ್ದರೆ, ಆ ಅರ್ಜಿಯು ಸಮರ್ಥನೀಯವಲ್ಲವೆಂದು ಮಾನ್ಯ ಸರ್ವೋಚ್ಚ ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ಆದ್ದರಿಂದ, ವಿಳಂಬವನ್ನು ವಿವರಿಸಲು ಅರ್ಜಿದಾರರಿಗೆ ಅವಕಾಶ ನೀಡುವ ಪ್ರಶ್ನೆಯು ನಿಷ್ಕಲ ಕಾವ್ಯವಾಗಿದ್ದು, ಅದಕ್ಕೆ ಅನುಮತಿ ನೀಡಿದರೆ, ಅದು ನ್ಯಾಯಾಲಯ ಪ್ರಕ್ರಿಯೆಯ ದುರ್ಬಳಕೆ ಎನಿಸುತ್ತದೆ.

22. ಜಗದೀಶ್ -ವಿರುದ್ಧ ಕರ್ನಾಟಕ ರಾಜ್ಯ, ನೆಕ್ಕಂಟಿ ರಮಾ ಲಕ್ಷ್ಮಿ ಮತ್ತು ವಿವೇಕ್ ಎಮ್. ಹಿಂದುಜಾ (ಮೇಲೆ ಹೇಳದ) ಮೊಕದ್ದಮೆಗಳಲ್ಲಿ ಮಾನ್ಯ ಸರ್ವೋಚ್ಚ ಚ ನ್ಯಾಯಾಲಯವು ನೀಡಿದ ತೀರ್ಪುಗಳು, ಪ್ರಸ್ತುತ ಮೊಕದ್ದಮೆಗೆ ನೇರವಾಗಿ ಅನ್ವಯವಾಗುತ್ತವೆ.21 ವರ್ಷಗಳ ವಿಳಂಬವಾಗಿದೆ.ಅರ್ಜಿ ಸಲ್ಲಿಸಿದ ಜಮೀನುಗಳ ಮರುಸ್ವಾಧೀನ ಕೋರಿ ಅರ್ಜಿದಾರರ ಕಡೆಯಿಂದಾದ ಒಟ್ಟಾರೆ ವಿಳಂಬ ಮತ್ತು ನಿಷ್ಕ್ರಿಯತೆಯಿಂದಾಗಿ, 1 ನೇ ಪ್ರತಿವಾದಿ/ಜಿಲ್ಲಾಧಿಕಾರಿಗಳು, ಇದರಲ್ಲಿನ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ಸರಿಯಾಗಿಯೇ

ನಿರಾಕರಿಸಿದ್ದಾರೆ.ಆದುದರಿಂದ, ಅರ್ಜಿದಾರರು ವಿಳಂಬವನ್ನು ವಿವರಿಸುವ ಅವಕಾಶ ಕೋರಿ ತಮ್ಮ ಹಕ್ಕನ್ನು ಪುನರೂರ್ಜಿತಗೊಳಿಸಲಾಗುವುದಿಲ್ಲ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ.

23. ರಿಟ್ ಅರ್ಜಿಯಲ್ಲಿ ಮಂಡಿಸಿದ ಕಾರಣಗಳನ್ನು ಮತ್ತು ವಾದ-ಪ್ರತಿವಾದ ಮಂಡಿಸುವಾಗ ಎತ್ತಿದ ವಾದಗಳನ್ನು, ಸೂಕ್ತ ಕಾಲಾವಧಿಯೊಳಗೆ ಮರುಸ್ವಾಧೀನಕ್ಕೆ ಮನವಿ ಮಾಡಿ ಕ್ರಮವನ್ನು ಕೋರುವಂಥ ಮೊಕದ್ದಮೆಗಳಲ್ಲಿ ಮಾತ್ರವೇ ಪುರಸ್ಕರಿಸಲು ಸಾಧ್ಯ.ಸೂಕ್ತ ಅವಧಿಯೊಳಗೆ ಪುನರ್ವಶ ಕೋರಿ ಅರ್ಜಿಯನ್ನು ಸಲ್ಲಿಸುವಂಥ ಮೊಕದ್ದಮೆಗಳಲ್ಲಿ ಮಾತ್ರವೇ ಪ್ರಾಧಿಕಾರಿಗಳು ಅಂಥ ಎಲ್ಲ ವಾದಗಳನ್ನು ಪರಿಶೀಲಿಸಲು ಸಾಧ್ಯವೇ ಹೊರತು, ಸೂಕ್ತ ಕಾಲಾವಧಿ ಮೀರಿ ಕ್ರಮ ಕೋರುವ ಮೊಕದ್ದಮೆಗಳಲ್ಲಿ ಅಲ್ಲ.

24. ಮೇಲೆ ಹೇಳಿದ ಕಾರಣಗಳಿಗಾಗಿ, ಮೇಲೆ ರೂಪಿಸಿದ 1 ನೇ ಮತ್ತು 2 ನೇ ಪರಿಶೀಲನಾಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ ಮತ್ತು 3 ನೇ ಪರಿಶೀಲನಾಂಶಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.ಆದ್ದರಿಂದ, ನಾನು ಈ ಮುಂದಿನ ಆಜ್ಞೆಯನ್ನು ಹೊರಡಿಸುತ್ತೇನೆ:

ಆಜ್ಞೆ

ರಿಟ್ ಅರ್ಜಿಯು ಗುಣಾರ್ಹತೆಗಳಿಲ್ಲದ ಅರ್ಜಿಯಾಗಿದ್ದು, ತದನುಸಾರವಾಗಿ ಅದನ್ನು ವಜಾಗೊಳಿಸಲಾಗಿದೆ.